ಶ್ರೀ ರಾಜಶೇಖರ ಶೀಲವಂತ ವೀರಣ್ಣ : ದಿ. 2.7.99ರಂದು ಸರ್ಕಾರ ಗುಳೇದಗುಡ್ಡಕ್ಕೆ ಬಸ್ ಡಿಪೋ ಸಲುವಾಗಿ ಆದೇಶ ಹೊರಡಿಸಿ ಜಾಗ ಕೊಟ್ಟಿದೆ. ಸದರಿ ಬಸ್ ನಿಲ್ದಾಣದ ಸಲುವಾಗಿ ಕ್ರಮ ಜರುಗಿಸಲಾಗಿದೆ ಎಂದು ಉತ್ತರಿಸಿದ್ದಾರೆ. ಎಲ್ಲಾ ಪಕ್ಷೇತರ ಜನತೆಯ ಪರವಾಗಿ ಅವರಿಗೆ ಹಾಗೂ ಮಾನ್ಯ ಮುಖ್ಯಮಂತ್ರಿಯವರಿಗೆ ನಾನು ಧನ್ಯವಾದಗಳನ್ನರ್ಪಿಸುತ್ತೇನೆ. ಅದರ ಜೊತೆಗೆ, ಬಸ್ ಡಿಪೋ ನಿರ್ಮಾಣಕ್ಕೆ ಆದೇಶವನ್ನು ಯಾವಾಗ ಹೊರಡಿಸಲಾಯಿತು, ಈ ವರ್ಷಕ್ಕೆ ಅದಕ್ಕೆಷ್ಟು ದುಡ್ಡಿಟ್ಟಿದ್ದೀರಿ ಎಂಬ ಬಗ್ಗೆ ತಿಳಿಸಬೇಕೆಂದು ಕೇಳುತ್ತೇನೆ.

ಶ್ರೀ ಬಿ.ಎನ್. ಬಚ್ಚೇಗೌಡ : ಬಾದಾಮಿ ಕ್ಷೇತ್ರದಲ್ಲಿ ಗುಳೇದಗುಡ್ಡ ಕ್ಷೇತ್ರ ಬರುತ್ತದೆ. ಸರ್ಕಾರಕ್ಕೆ ತಾಲ್ಲೂಕು ಮಟ್ಟದಲ್ಲಿ ಒಂದೊಂದು ಬಸ್ ಡಿಪೋವನ್ನು ತೆರೆಯುವ ಯೋಚನೆಯಿದೆ. ರಾಜ್ಯದಲ್ಲಿರುವ 123 ರಾಷ್ಟ್ರೀಕೃತ ಪ್ರದೇಶದಲ್ಲಿರುವ ತಾಲ್ಲೂಕುಗಳಿಗೂ ಬಸ್ ಡಿಪೋ ಕೊಡುವ ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಅದರಲ್ಲಿ ವಿಶೇಷವಾಗಿ ನಮ್ಮ ಶಾಸಕರ ಪ್ರಯತ್ನ ಬಹಳ ದಿವಸಗಳಿಂದ ಇದ್ದರೂ ಸಹ, ಜಮೀನು ಸಿಕ್ಕಿರಲಿಲ್ಲ. ದಿ. 2.7.99ರಂದು ಪುರಸಭೆಯವರಿಂದ ನಮ್ಮ ಕಡೆಗೆ ಎರಡು ಎಕರೆ 39 ಗುಂಟೆ, ಒಂದು ಎಕರೆಗೆ 27,561 ರೂಪಾಯಿ ಪ್ರಕಾರ ಜಮೀನು ಸಿಕ್ಕಿದೆ. ಈಗ ನಾವು ಅದಕ್ಕೆ ಬೇಕಾದ ಪ್ಲಾನು, ಎಸ್ಟಿಮೇಟ್ ಮಾಡಿಕೊಳ್ಳುತ್ತೇವೆ. ಅದಕ್ಕೆ 80 ಲಕ್ಷ ರೂಪಾಯಿಗಳನ್ನು ಅಂದಾಜು ಮಾಡಿದ್ದೇವೆ. ಟೋಕನ್ ಮನಿಯಾಗಿ 10 ಸಾವಿರ ರೂಪಾಯಿಗಳನ್ನಿಟ್ಟಿದ್ದೇವೆ. ಶಾಸಕರ ಪ್ರಯತ್ನದ ಜೊತೆಗೆ ವಾಯುವ್ಯ ಸಾರಿಗೆ ವೈಸ್ ಛೇರ್ಮನ್‌ರಾದ ಶ್ರೀ ಕಲ್ಬುರ್ಗಿಯವರ ಪ್ರಯತ್ನ ಮತ್ತು ಸಾರ್ವಜನಿಕರ ಬೇಡಿಕೆಯೂ ಅದರಲ್ಲಿ ಸೇರಿತ್ತು. ಎಲ್ಲರ ಅವಶ್ಯಕತೆ ನೋಡಿ, ಈ ಕಾರ್ಯವನ್ನು ನಾವು ಮಾಡಿದ್ದೇವೆ. ವಿಶೇಷವಾಗಿ ಗುಳೇದಗುಡ್ಡ 41 ಸಾವಿರ ಜನಸಂಖ್ಯೆ ಇರುವ ದೊಡ್ಡ ಪಟ್ಟಣವಾಗಿರುವುದರಿಂದ, ಬಾದಾಮಿ ಕ್ಷೇತ್ರದ ಜೊತೆಗೆ ಇದನ್ನೂ ಸೇರಿಸಿ ಆದಷ್ಟು ಬೇಗ ಮಾಡಿಕೊಡುತ್ತೇವೆ.

ಕೊಡಗೆ ಜಿಲ್ಲೆಯಲ್ಲಿ ಭೂ ನೋಂದಣಿ ಶುಲ್ಕ

411 -ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಸೋಮವಾರಪೇಟೆ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಡಗು ಜಿಲ್ಲೆಯಲ್ಲಿ ಲ್ಯಾಂಡ್ ರಿಜಿಸ್ಟ್ರೇಷನ್ ಚಾರ್ಜನ್ನು ಯಾವ ಯಾವ ಗ್ರಾಮಕ್ಕೆ ಎಷ್ಟು ಎಷ್ಟು ಮೌಲ್ಯವನ್ನು ನಿಗಧಿ ಪಡಿಸಲಾಗಿದೆ. ಇದನ್ನು ನಿಗಧಿ ಪಡಿಸುವಾಗ ಯಾವ ಮಾನ ದಂಡದ ಮೇಲೆ ನಿಗಧಿ ಪಡಿಸಲಾಗಿದೆ (ಗ್ರಾಮವಾರು ವಿವರ ಒದಗಿಸುವುದು)

ಆ) ಯಾವ ಯಾವ ಬೆಳೆ ಬೆಳೆಯುವ ಜಾಗಕ್ಕೆ ಎಷ್ಟು ಎಷ್ಟು ನಿಗಧಿ ಪಡಿಸಲಾಗಿದೆ?

ಶ್ರೀ ಬಿ. ಸೋಮಶೇಖರ್ (ಕಂದಾಯ ಸಚಿವರು) :

ಅ) ಕರ್ನಾಟಕ ಮುದ್ರಾಂಕ ಕಾಯ್ದೆ 1957ರ ಕಲಂ 45(ಬಿ) ಅಡಿಯಲ್ಲಿ ರಚಿಸಿರುವ ಸಮಿತಿಯು ಕೊಡಗು ಜಿಲ್ಲೆಯಲ್ಲಿ ಮಾರ್ಗಸೂಚಿ ಬೆಲೆಗಳನ್ನು ಆಯಾಯಾ ಗ್ರಾಮಗಳಲ್ಲಿನ ಹಲವಾರು ಅಂಶಗಳ ಆಧಾರದ ಮೇಲೆ ಅಂದರೆ ಗ್ರಾಮದಿಂದ ಸ್ವತ್ತುಗಳು ಎಷ್ಟು ದೂರದಲ್ಲಿವೆ, ಹಾಗೂ ವಿವಿಧ

ಬಗೆಯ ಜಮೀನಿನ ಆಧಾರದ ಮೇಲೆ ನಿರ್ಧರಿಸಲಾಗಿದೆ. (ಗ್ರಾಮವಾರು ವಿವರಗಳನ್ನು ಪ್ರತ್ಯೇಕವಾಗಿ ಒದಗಿಸಲಾಗುತ್ತಿದೆ)

ಆ) ಮಾರ್ಗ ಸೂಚಿ ಬೆಲೆಗಳನ್ನು ಖುಷ್ಕಿ, ತರಿ, ಭಾಗಾಯ್ತು ಮತ್ತು ಕಾಫಿ ಬೆಳೆಯುವ ಜಮೀನುಗಳಿಗೆ ಪ್ರತ್ಯೇಕವಾಗಿ ನಿಗಧಿಪಡಿಸಲಾಗಿದೆ. (ವಿವರಗಳನ್ನು ಪ್ರತ್ಯೇಕವಾಗಿ ಒದಗಿಸಲಾಗುತ್ತಿದೆ)

ಶ್ರೀ ಎಂ.ಪಿ. ಅಪ್ಪಚ್ಚುರಂಜನ್ : ನಾನು ಕೇಳಿದ ಪ್ರಶ್ನೆಗೆ ಅವರು ನೀಡಿರುವ ಉತ್ತರ ಸಮರ್ಪಕವಾಗಿಲ್ಲ. ಯಾವ್ಯಾವ ಗ್ರಾಮಕ್ಕೆ ಯಾವ್ಯಾವ ಮಾನದಂಡದ ಪ್ರಕಾರ ಫಿಕ್ಸ್ ಮಾಡಿದ್ದೀರಿ, ಕೊಡಗಿನಲ್ಲಿ ಯಾವಾಗ ಸಮಿತಿ ರಚಿಸಿದ್ದೀರಿ, ಸಮಿತಿಯಲ್ಲಿ ಯಾರ್ಯಾರಿದ್ದಾರೆ, ಹಾಗೂ ಉಳಿದ ವಿವರಗಳನ್ನು ಯಾವಾಗ ಕೊಡುತ್ತೀರೆಂಬ ಬಗ್ಗೆ ಹೇಳಬೇಕು.

ಶ್ರೀ ಬಿ. ಸೋಮಶೇಖರ್ : ಸ್ಟಾಂಪ್ ಮತ್ತು ರಿಜಿಸ್ಟ್ರೇಷನ್ ಆಕ್ಟ್ ಸೆಕ್ಷನ್ 45ರ ಪ್ರಕಾರ, ಜಿಲ್ಲೆಗೊಂದೊಂದು ಮಾರ್ಗಸೂಚಿ ದರಗಳನ್ನು ನಿಗದಿ ಮಾಡುವುದಕ್ಕೆ ಸಮಿತಿ ಇರುತ್ತದೆ. ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿದ್ದು, ಅದರಲ್ಲಿ ಸಂಬಂಧಪಟ್ಟ ಆ ಜಿಲ್ಲೆಯಲ್ಲಿನ ಎಫ್ ಎಫ್ ಕೆಸಿಸಿಐನ ಪ್ರತಿನಿಧಿಗಳಿರಬಹುದು, ವ್ಯಾಪಾರ ಸಂಘದ ಪ್ರತಿನಿಧಿಗಳಿರಬಹುದು, ಖಾಸಗಿ ವ್ಯಕ್ತಿಗಳ ಒಬ್ಬಿಬ್ಬರನ್ನು ಸೇರಿಸಿ ಸಮಿತಿ ರಚಿಸಲಾಗಿದೆ. ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ತಹಶೀಲ್ದಾರ್ ರವರು, ಸಬ್-ರಿಜಿಸ್ಟ್ರಾರ್ ರವರು ಸೇರಿದಂತೆ ಸಮಿತಿ ಇರುತ್ತದೆ. ಸಮಿತಿಯವರು ಪ್ರತಿಯೊಂದು ಸರ್ವೆ ನಂಬರ್ ಪ್ರಕಾರ ಮತ್ತು ಆಸ್ತಿಗಳ ಮಾರ್ಕೆಟ್ ಬೆಲೆಯನ್ನು ಗುರುತಿಸಿ, ಮಾರ್ಗಸೂಚಿ ದರಗಳನ್ನು ನಿಗದಿಪಡಿಸುತ್ತಾರೆ. ನೀವು ಕೇಳಿದ ಸಂಬಂಧಪಟ್ಟ ಹಾಗೆ ಒಂದು ಪುಸ್ತಕವೇ ಇದೆ. ಪ್ರತಿಯೊಂದು ಹಳ್ಳಿಗಳ ಮಾರ್ಗಸೂಚಿಯ ವಿವರಣೆಯೂ ಅದರಲ್ಲಿರುತ್ತದೆ. ಇದನ್ನು ನಾನು ಪ್ರತ್ಯೇಕವಾಗಿ ಒದಗಿಸಿಕೊಡುತ್ತೇನೆ. ನಾವು ಏನು ಮಾಡಿದ್ದೇವೆ, ಪ್ರತಿ ಸಬ್ ರಿಜಿಸ್ಟ್ರಾರ್ ಆಫೀಸ್ ನಲ್ಲಿ ಇದನ್ನು ನೋಟಿಸ್ ಬೋರ್ಡ್‌ನಲ್ಲಿ ಹಾಕುತ್ತೇವೆ. ಆ ನೋಟಿಸ್ ಬೋರ್ಡ್ ಪ್ರಕಾರ ಸ್ಟ್ಯಾಂಪ್ ಡ್ಯೂಟಿಯನ್ನು ಆ ವ್ಯಕ್ತಿಗಳು ಕಟ್ಟಬೇಕೆಂದು ಸೂಚನೆ ಕೊಟ್ಟಿದ್ದೇವೆ. ತಮಗೂ ಇದರ ಕಾಪಿಯನ್ನು ಪ್ರತ್ಯೇಕವಾಗಿ ನಾನು ಒದಗಿಸಿಕೊಡುತ್ತೇನೆ. ಈ ಸದನದಲ್ಲಿ ಆ ಮಾಹಿತಿಯನ್ನು ಒದಗಿಸತಕ್ಕಂತಹ ಅವಶ್ಯಕತೆ ನನಗೆ ಕಂಡುಬಂದಿಲ್ಲ. ಏಕೆಂದರೆ ಇಷ್ಟೊಂದು ಕಡತವನ್ನು ಪ್ರಿಂಟ್ ಮಾಡಿ ಹಂಚುವುದು ಬಹಳ ಕಷ್ಟವಾಗುತ್ತದೆ. ಇವತ್ತು ಪಾರದರ್ಶಕವಾಗಿ ಮಾಡಿದ್ದೇವೆ. ಏನೆಂದರೆ, ಈ ಸಮಿತಿಯವರು ಮೊದಲು ಮಾರ್ಗಸೂಚಿ ದರಗಳನ್ನು ನಿಗದಿ ಮಾಡಿ ಸರ್ಕಾರಕ್ಕೆ ಕಳುಹಿಸಿಕೊಡಬೇಕಾಗಿತ್ತು. ಸರ್ಕಾರ ಆ ಬಗ್ಗೆ ನೋಟಿಫಿಕೇಷನ್ ಹೊರಡಿಸಬೇಕಾದರೆ ವರ್ಷಾನುಗಟ್ಟಲೆ ತೆಗೆದುಕೊಳ್ಳುತ್ತಿತ್ತು. ಇವತ್ತು ನಾವು ಆಯಾ ಸಮಿತಿಗಳಿಗೆ ಅಧಿಕಾರ ಕೊಟ್ಟಿದ್ದೇವೆ. ಯಾವಾಗ ಸೂಕ್ತವೆಂದು ಕಾಣುತ್ತದೆ, ಬೆಲೆ ಇಳಿಸತಕ್ಕಂಥದ್ದು, ಏರಿಸತಕ್ಕಂಥಾದ್ದು ಆ ಸ್ಥಳೀಯ ಮಾರುಕಟ್ಟೆ ದರದ ಆಧಾರದ ಮೇಲೆ ಅವರೇ ಮೀಟಿಂಗ್ ಮಾಡಿ ತೀರ್ಮಾನ ತೆಗೆದುಕೊಂಡು ಅವರು ನೋಟಿಫಿಕೇಷನ್ ಇಷ್ಯೂ ಮಾಡುತ್ತಾರೆ. ಈ ವ್ಯವಸ್ಥೆಯನ್ನು ಬಹಳ ಸರಳೀಕರಣ ಮಾಡಿದ್ದೇವೆ. ಮತ್ತು ಹೊರಡಿಸಿದ ಮಾರ್ಗಸೂಚಿ ದರವನ್ನು ಕಛೇರಿಯ

ನೋಟಿಸ್ ಬೋರ್ಡ್‌ನಲ್ಲಿ ಹಾಕಬೇಕು. ಅದು ಗ್ರಾಮ ಪಂಚಾಯಿತಿ ಕಛೇರಿಗಳಿರಬಹುದು, ತಾಲ್ಲೂಕು ಪಂಚಾಯಿತಿ ಕಛೇರಿಗಳಿರಬಹುದು, ನಾಡ ಕಛೇರಿಗಳಿರಬಹುದು ಈ ಒಂದು ವ್ಯವಸ್ಥೆ ಪಾರದರ್ಶಕವಾಗಿ ಇರಬೇಕು ಎನ್ನತಕ್ಕಂಥಾದ್ದು ನಮ್ಮ ಉದ್ದೇಶ. ಆ ರೀತಿ ನಾವು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ : ಮಾನ್ಯ ಮಂತ್ರಿಯವರು ಬಹಳ ವಿವರವಾಗಿ ಹೇಳಿದ್ದಾರೆ. ಅಲ್ಲಿರತಕ್ಕ ತೊಂದರೆ ಏನೆಂದರೆ, ಅಲ್ಲಿಯ ಗ್ರಾಮಸ್ತರಿಗೆ ರಿಜಿಸ್ಟ್ರೇಷನ್ ಛಾರ್ಜಸ್ ಎಷ್ಟೆಷ್ಟು ರೇಟ್ ಎಂಬುದು ಗೊತ್ತಿಲ್ಲ. ಸ್ವತ್ತಿಗೆ ಒಂದು ಲಕ್ಷ ರೂಪಾಯಿಗಳ ವ್ಯಾಲ್ಯೂ ಇದೆ, ಇದಕ್ಕೆ ಎಷ್ಟಾಗುತ್ತದೆ, ನೀವು ಕೈಗೆ ಇಷ್ಟು ಕೊಟ್ಟರೆ ನಾವು ಕಡಿಮೆ ಮಾಡುತ್ತೇವೆ ಎಂದು ಹೇಳಿ ಆದಷ್ಟು ಭ್ರಷ್ಟಾಚಾರ ನಡೆಯುತ್ತಿದೆ. ತಾವು ನೋಟಿಸ್ ಬೋರ್ಡ್‌ನಲ್ಲಿ ಹಾಕುವುದನ್ನು ಕಡ್ಡಾಯವಾಗಿ ಮಾಡಬೇಕೆಂದು ತಮ್ಮ ಮುಖಾಂತರ ಕೇಳುತ್ತೇನೆ. ಭ್ರಷ್ಟಾಚಾರದ ವಿರುದ್ಧ ತನಿಖೆ ಮಾಡಬೇಕಾಗುತ್ತದೆ.

ಶ್ರೀ ಬಿ. ಸೋಮಶೇಖರ್ : ಇದು ಎಲ್ಲರಿಗೂ ಗೊತ್ತಿರತಕ್ಕಂತಹ ವಿಚಾರ. ಸಬ್- ರಿಜಿಸ್ಟ್ರಾರ್ ಕಛೇರಿಯಲ್ಲಿ ಹಣ ಇಲ್ಲದೆ ರಿಜಿಸ್ಟ್ರರ್ ಆಗುವುದಿಲ್ಲ ಎಂದು ಪ್ರತೀತಿ ಎಲ್ಲಾ ಕಡೆ ಇದೆ. ನಾನು ಅದನ್ನು ಮುಚ್ಚಿಡುವುದಿಲ್ಲ, ನೀವೂ ಅದನ್ನು ಮುಚ್ಚಿಡುವುದಕ್ಕೆ ಸಾಧ್ಯವಿಲ್ಲ. ಇದನ್ನು ಎಷ್ಟರ ಮಟ್ಟಿಗೆ ತಡೆಗಟ್ಟಬೇಕು ಎನ್ನುವ ಕಾರ್ಯಕ್ರಮವನ್ನು ನಾವು ಹಾಕಿಕೊಂಡಿದ್ದೇವೆ. ಆದ್ದರಿಂದ ಅದನ್ನು ಕಡ್ಡಾಯ ಮಾಡಿದ್ದೇವೆ. ಯಾರೂ ಒಳಗಡೆ ಇಟ್ಟುಕೊಂಡು ಮಾಡುವುದಲ್ಲ. ಪ್ರತಿಯೊಂದು ಮಾರ್ಗಸೂಚಿ ದರಗಳನ್ನು ಕಡ್ಡಾಯವಾಗಿ ನೋಟಿಸ್ ಬೋರ್ಡಿನಲ್ಲಿ ಹಾಕತಕ್ಕದ್ದು ಇದೆ. ಈಗಾಗಲೇ ಒಂದು ಕಪ್ಪು ಬೋರ್ಡನ್ನು ಮಾಡಿಸಿ ಅದರ ಮೇಲೆ ಈ ದರಗಳನ್ನು ಬರೆಸುತ್ತಿದ್ದೇವೆ. ಯಾವ ಯಾವ ದಾಖಲಾತಿಗಳನ್ನು ಕೇಳಬೇಕು, ಇದನ್ನೂ ಸಹ ನಾವು ನೋಟಿಸ್ ಬೋರ್ಡಿಗೆ ಹಾಕುತ್ತಿದ್ದೇವೆ. ಸಬ್-ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಆ ದಾಖಲೆ ತೆಗೆದುಕೊಂಡು ಬನ್ನಿ, ಈ ದಾಖಲೆ ತೆಗೆದುಕೊಂಡು ಬನ್ನಿ ಎಂದು ಎನ್‌ಒಸಿ ತೆಗೆದುಕೊಂಡು ಬನ್ನಿ ಎಂದು ಸುಮ್ಮನೆ ಹೆರ್ಯಾಸ್ ಮಾಡುತ್ತಾರೆ. ಒಳಗಡೆ ನೋಡಿದರೆ ಏನೂ ಬೇಕಾಗುವುದಿಲ್ಲ. ಇದನ್ನೂ ಸಹ ನಾವು ಪಾರದರ್ಶಕ ಮಾಡಿ ಏನೇನು ಕೇಳಬೇಕು ಅದನ್ನು ನೋಟಿಸ್ ಬೋರ್ಡಿನಲ್ಲಿ ಹಾಕಿ ಈ ಎರಡು ಮಾರ್ಗ ಸೂಚಿಗಳನ್ನು ಇವತ್ತು ಕಡ್ಡಾಯವಾಗಿ ಮಾಡಬೇಕೆಂದು ಮಾಡಿದ್ದೇವೆ. ಎಂಟು-ಹತ್ತು ದಿನಗಳಲ್ಲಿ ಎಲ್ಲಾ ಜಿಲ್ಲೆಗಳ, ಎಲ್ಲಾ ಸಬ್-ರಿಜಿಸ್ಟ್ರಾರ್ ಕಛೇರಿಗಳಲ್ಲಿ ಇರುತ್ತದೆ. ಅದನ್ನು ತಾವು ನೋಡಬೇಕು. ನಾವು ಅವರಿಗೆ ತಿಳಿಸಿ 15 ದಿನಗಳಾಗಿವೆ. ಪ್ರತಿಯೊಂದು ಜಿಲ್ಲಾ ರಿಜಿಸ್ಟ್ರಾರ್‌ಗೆ ನಾವು ಜವಾಬ್ದಾರಿ ವಹಿಸಿ ಕೊಟ್ಟಿದ್ದೇವೆ. ನೀವು ಸರ್ಕಾರಕ್ಕೆ ದಾಖಲೆ ಕಳುಹಿಸಿಕೊಡಬೇಕು. ಎಂಟು ದಿನಗಳ ಒಳಗೆ ಪ್ರತಿಯೊಂದು ಸಬ್-ರಿಜಿಸ್ಟ್ರಾರ್ ಕಛೇರಿ ಮುಂದೆ ನೋಟಿಸ್ ಬೋರ್ಡಿನಲ್ಲಿ ಇದು ಎರಡೂ ಇರಬೇಕು. ಒಂದು ಯಾವ ದಾಖಲೆಗಳು ಕೇಳುತ್ತಾರೆ, ಎರಡನೆಯದಾಗಿ ಏನೇನು ಮಾರ್ಗಸೂಚಿ ದರಗಳಿವೆ ಎಂದು ಆ ನೋಟಿಸ್ ಬೋರ್ಡಿನಲ್ಲಿರಬೇಕು. ಎಲ್ಲಾ ಕಡೆ ನಾವು ಈ ಸೂಚನೆ ಕೊಟ್ಟಿದ್ದೇವೆ.

ಶ್ರೀ ಕೆ.ಎಸ್. ಈಶ್ವರಪ್ಪ : ಮಾರ್ಗ ಸೂಚಿ ದರಗಳು ಎಷ್ಟು, ಫೀಸ್ ಎಷ್ಟು ಈ ಎರಡನ್ನೂ ನೋಟಿಸ್ ಬೋರ್ಡಿನಲ್ಲಿ ಹಾಕುವುದು ಸ್ವಾಗತಾರ್ಹ. ಇದು ಎರಡೂ ಕೊಟ್ಟರೂ ಕೂಡ ಅವರು

ಬೇಕೆಂತಲೇ ಈ ತರಹ ತೊಂದರೆ ಕೊಡುವುದು ಇದೆ. ಅಧಿಕಾರಗಳ ಬಗ್ಗೆ ನಾವು ದಾಖಲೆ ಕೊಟ್ಟರೆ ಶಿಸ್ತಿನ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಸೋಮಶೇಖರ್ : ಆ ಕ್ಷಣದಲ್ಲಿ ಅವರಿಗೆ ಸಸ್ಪೆಂಡ್ ಮಾಡಿ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ನಾವು ತೆಗೆದುಕೊಳ್ಳುತ್ತೇವೆ.

ಶ್ರೀ ಅರಗ ಜ್ಞಾನೇಂದ್ರ : ನಮಗೆ ಹಿಂಸೆ ಆಗುತ್ತಿರತಕ್ಕಂಥಾದ್ದು ಡಾಕ್ಯುಮೆಂಟ್ ರೈಟರ್ ನಿಂದ. ಸಬ್-ರಿಜಿಸ್ಟ್ರಾರ್ ಯಾರ ಹತ್ತಿರವೂ ಬಾಯಿ ಬಿಟ್ಟು ಕೇಳುವುದಿಲ್ಲ, ಡಾಕ್ಯುಮೆಂಟ್ ರೈಟರ್ ಇಷ್ಟು ಕೊಡಬೇಕೆಂದು ಫಿಕ್ಸ್ ಮಾಡುವುದು ಇದೆ, ಆರ್‌ಟಿಒ ಆಫೀಸ್‌ನಲ್ಲಿ ಬ್ರೋಕರ್ ಇದ್ದ ಹಾಗೆ. ಅದಕ್ಕಾಗಿ ಅವರ ಹತ್ತಿರ ಹೋಗದೆ ಡೈರೆಕ್ಟಾಗಿ ಹೋಗುವ ಹಾಗೆ ಮಾನ್ಯ ಜಾಲಪ್ಪನವರ ಕಾಲದಲ್ಲಿ ಈ ಬಗ್ಗೆ ಒಂದು ಫಾರ್ಮೆಟ್ ಮಾಡುತ್ತೇವೆಂದು ಹೇಳಿಕೆ ಕೊಟ್ಟಿದ್ದರು. ರೈತ ನೇರವಾಗಿ ಹೋಗಿ ಫಾರ್ಮೆಟ್ ಫಿಲ್-ಅಪ್ ಮಾಡಿ ಕೊಟ್ಟರೆ ಸಾಕು ಎಂದು ಹೇಳಿದ್ದರು. ಮಧ್ಯವರ್ತಿಗಳನ್ನು ಅವರು ಬಿಟ್ಟು ಬಿಡಬೇಕು.

ಶ್ರೀ ಬಿ. ಸೋಮಶೇಖರ್ : ಮಾನ್ಯ ಸಭಾಧ್ಯಕ್ಷರೆ, ತಮಗೆ ಜ್ಞಾಪಕ ಇದೆಯೋ ಇಲ್ಲವೋ ಗೊತ್ತಿಲ್ಲ. ಹೋದ ಅಧಿವೇಶನದಲ್ಲಿ ಆ ಆಕ್ಟ್‌ಗೆ ತಿದ್ದುಪಡಿಯನ್ನು ನಾವು ತಂದಿದ್ದೇವೆ. We have dispensed with the stamp papers. We have made it optional. We have dispensed with the deed-writer. ಆ ಒಂದು ಬಿಕ್ಲು ಬರೆಯುವಂತಹ ಅವಶ್ಯಕತೆ ಇಲ್ಲ. ಪ್ರಿಂಟೆಡ್ ಫಾರ್ಮೆಟ್ ಮಾಡಿ ಈಗಾಗಲೇ ಲಾ-ಡಿಪಾರ್ಟ್‌ಮೆಂಟ್ ಹತ್ತಿರ ಡಿಸೈನ್ ಮಾಡಿ ಪ್ರಿಂಟಿಂಗ್‌ಗೆ ಕಳುಹಿಸಿಕೊಟ್ಟಿದ್ದೇವೆ. ಸ್ಟ್ಯಾಂಪ್ ಪೇಪರ್ ತೆಗೆದುಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಸ್ಟ್ಯಾಂಪ್ ಡ್ಯೂಟಿ ಏನಿದೆ, ಅದನ್ನು ಚೆಕ್ ಮುಖಾಂತರ ಅಥವಾ ಡಿಡಿ ಮುಖಾಂತರ ಸಬ್-ರಿಜಿಸ್ಟ್ರಾರ್ ಆಫೀಸ್‌ನಲ್ಲಿ ತೆಗೆದುಕೊಂಡು ಹೋದರೆ ಸಾಕು. ಅದನ್ನು ಇಲ್ಲಿ ಪಾಸ್ ಮಾಡಿ ನಿಯಮಾವಳಿ ರಚನೆ ಮಾಡಿ ಆಗಿದೆ. ಕೇಂದ್ರ ಸರ್ಕಾರ ಮತ್ತು ರಾಷ್ಟ್ರಪತಿಗಳ ಅನುಮೋದನೆ ಆಗಬೇಕಾಗಿದೆ. ಒಂದು ವಾರದ ಒಳಗೆ ಅದು ನಮಗೆ ಬರುತ್ತದೆ. ಪ್ರತಿ ದಿನ ನಾವು ಕೇಂದ್ರ ಸರ್ಕಾರದ ಜೊತೆ ಸಂಪರ್ಕ ಮಾಡುತ್ತಿದ್ದೇವೆ. ಸುಮಾರು ಎಂಟು ದಿನಗಳೊಳಗೆ ಆ ನಿಯಮಾವಳಿಗಳನ್ನು ರಚನೆ ಮಾಡುತ್ತೇವೆ.

ಶ್ರೀ ಟಿ.ಬಿ. ಜಯಚಂದ್ರ : ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಸಚಿವರು ಬಹಳ ಪ್ರಾಮಾಣಿಕವಾಗಿ ಉತ್ತರ ಕೊಡುತ್ತಿದ್ದಾರೆ. ನೀವು ಹೇಳುವ ಧಾಟಿ ನೋಡಿದಾಗ ನಮಗೆ ದುಃಖವಾಗುತ್ತದೆ. ಸಬ್-ರಿಜಿಸ್ಟ್ರಾರ್ ಆಫೀಸ್‌ನಲ್ಲಿ ಏನೇನು ನಡೆಯುತ್ತದೆ ಎಂಬ ಬಗ್ಗೆ ದುಡ್ಡು ಕೊಟ್ಟರೆ ಏನಾಗುತ್ತದೆ, ದುಡ್ಡು ಕೊಡದೆ ಇದ್ದರೆ ಏನಾಗುತ್ತದೆ ಎಂದು ಮಾನ್ಯ ಸಚಿವರಾಗಿ ನೀವು ಹೇಳುತ್ತಿದ್ದೀರಿ. ಅಲ್ಲಿನ ವಸ್ತುಸ್ಥಿತಿಯನ್ನು ನಾನು ಹೇಳುತ್ತಿದ್ದೇನೆ.

ಶ್ರೀ ಬಿ. ಸೋಮಶೇಖರ್ : ಅಲ್ಲಿ ಇರತಕ್ಕಂತಹ ಅವ್ಯವಸ್ಥೆಯನ್ನು ಯಾರೂ, ಏನೂ ಒಂದೇ ದಿನದಲ್ಲಿ ಸರಿಪಡಿಸುವುದಕ್ಕಾಗುವುದಿಲ್ಲ.

ಶ್ರೀ ಟಿ.ಬಿ. ಜಯಚಂದ್ರ : ನೀವು ಅದನ್ನು ಪ್ರಾಮಾಣಿಕವಾಗಿ ಒಪ್ಪಿಕೊಳ್ಳುತ್ತಿದ್ದೀರಿ. ನಾನು ಅದನ್ನು ಸ್ವಾಗತಿಸುತ್ತೇನೆ. ಆದರೆ ಅದನ್ನು ತಪ್ಪಿಸುವುದು ಹೇಗೆ? ದುಡ್ಡು ಕೊಡದೆ ಏನೂ ಆಗುವುದಿಲ್ಲ ಎಂದೂ ಸಹ ಹೇಳಿದಿರಿ. ಇಷ್ಟು ದುಡ್ಡು ಕೊಟ್ಟರೆ ಒಳ್ಳೆಯದು ಏನೂ ಕೇಳುವುದೇ ಬೇಕಾಗಿಲ್ಲವೆಂದು ಹಾಕಿಸಿ ಬಿಟ್ಟರೆ ಒಳ್ಳೆಯದು.

ಅಧ್ಯಕ್ಷರು : ನಾನು ಎಸ್.ಎಸ್. ಪಾಟೀಲ್‌ರವರಿಗೆ ಕೇಳುತ್ತೇನೆ, ಊರ ತುಂಬಾ ಜಂಗಮರಿದ್ದಾರೆ, ಕೋಳಿ ನಾಪತ್ತೆಯಾದರೆ ಯಾರು ತಿಂದ ಹಾಗೆ?

ಶ್ರೀ ಎಸ್.ಎಸ್. ಪಾಟೀಲ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಉಪ ನಾಯಕರು ಹೇಳಿದ ಹಾಗೆ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಲಂಚ ನಿಲ್ಲಬೇಕೆಂದರೆ ನಾವು ಜನರನ್ನು ಎಜ್ಯುಕೇಟ್ ಮಾಡಬೇಕು. ಸಾಮಾನ್ಯವಾಗಿ ಮೊದಲಿನಿಂದ ಇದು ನಡೆದು ಬಂದಿದೆ, ಒಂದು ಜಮೀನು ಖರೀದಿ ಮಾಡಬೇಕಾದರೆ ಸಬ್ ರಿಜಿಸ್ಟ್ರಾರ್‌ಗೆ ಇಷ್ಟು, ಇವರಿಗೆ ಇಷ್ಟು ಎಂದು ಬರೆಯುತ್ತಾರೆ. ಅದಕ್ಕೋಸ್ಕರ ಜನರಿಗೆ ಎಜ್ಯುಕೇಟ್ ಮಾಡಬೇಕು. ದರಗಳ ಬಗ್ಗೆ ಬೋರ್ಡ್ ಹಾಕಿದ್ದಾರೆ, ರೈತ ಅದಕ್ಕಿಂತ ಕಡಿಮೆ ತೆಗೆದುಕೊಂಡು ಹೋದರೆ ಮಾಡುವುದಿಲ್ಲ. ಅದರ ಮಧ್ಯೆ ಏಜೆಂಟರೂ ಕೂಡ ಇರುತ್ತಾರೆ. ಆ ಏಜೆಂಟರು ಈ ಕೆಲಸ ಮಾಡುತ್ತಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಕೆಲವು ಸಲ ಯಾವುದೋ ಕಾರಣಕ್ಕೆ ಜಾಸ್ತಿ ಬೆಲೆ ಕೊಟ್ಟು ಒಂದು ಜಮೀನು ರಿಜಿಸ್ಟರ್ ಮಾಡಿಸಿಕೊಂಡರೆ ಅದಕ್ಕಿಂತ ಕಡಿಮೆ ಬೆಲೆಗೆ ರಿಜಿಸ್ಟರ್ ಮಾಡಬಾರದು, ಅದರ ಮೇಲೆ ಇಷ್ಟು ಪರ್ಸೆಂಟೇಜ್ ಆದರೂ ವರ್ಷಕ್ಕೆ ಜಾಸ್ತಿ ಮಾಡಿ ರಿಜಿಸ್ಟರ್ ಮಾಡಬೇಕೆಂದು ಒಂದು ನಿಯಮವನ್ನು ಮಾಡಿ ಬಿಟ್ಟಿದ್ದಾರೆ. ಇದರಿಂದ ಬಹಳ ತೊಂದರೆಯಾಗುತ್ತಿದೆ. ಯಾರೋ ಬ್ಯಾಂಕ್‌ನಲ್ಲಿ ಸಾಲ ತೆಗೆದುಕೊಳ್ಳುವವರು, ಅಥವಾ ಇನ್ನೊಬ್ಬರು ಉದ್ದೇಶಪೂರ್ವಕವಾಗಿ ದುಡ್ಡು ಕೊಟ್ಟು ಸ್ಟ್ಯಾಂಪ್ ಡ್ಯೂಟಿ ಕೊಟ್ಟು ರಿಜಿಸ್ಟರ್ ಮಾಡಿಸುತ್ತಾರೆ. ಪಕ್ಕದಲ್ಲಿ ವಾಸ್ತವವಾಗಿ ಅದಕ್ಕಿಂತ ಕಡಿಮೆ ಬೆಲೆ ಇದ್ದರೂ ಆ ಕಮಿಟಿಗೆ ಅದನ್ನು ಕಡಿಮೆ ಮಾಡುವುದಕ್ಕೆ ಬರುವುದಿಲ್ಲ. ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್ ಏನಿದ್ದಾರೆ ಮೂರು-ನಾಲ್ಕು ವರ್ಷ ಹಾಗೆಯೇ ಬಿಟ್ಟು ಇನ್‌ಸ್ಪೆಕ್ಷನ್ ಮಾಡಿ, ರಿವ್ಯೂ ಮಾಡಿ, ಫೈನಲ್ ಡಿಸಿಷನ್ ತೆಗೆದುಕೊಂಡಿದ್ದಾರೆ.

SPEAKER : You are an experienced person. Corruption, in some Government offices, has become a caustomary practice. ಅದು ಒಂದು ಸಂಪ್ರದಾಯವಾಗಿಬಿಟ್ಟಿದೆ. ಇದು ಹೆಬ್ಬೆಟ್ಟಿಗೆ ಹಚ್ಚುವ ಮಸಿಯಿಂದ ಪ್ರಾರಂಭವಾಗುತ್ತದೆ. ಇದು ಸಂಪ್ರದಾಯಿಕವಾಗಿ ಎಲ್ಲಾ ಕಛೇರಿಗಳಲ್ಲಿ ನಡೆದು ಹೋಗಿ ಬಿಟ್ಟಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ನಮ್ಮ ತೊಂದರೆ ಅವರಿಗೆ ಅರ್ಥವಾಗಬೇಕು. ವಾಸ್ತವವಾಗಿ ಜಮೀನು ಮಾರಾಟ ಮಾಡಬೇಕೆಂದರೂ ಸಹ ನಾವು ಜಾಸ್ತಿ ಸ್ಟ್ಯಾಂಪ್ ಡ್ಯೂಟಿ ಕಟ್ಟಬೇಕೆಂದರೆ ಅದರಿಂದಲೂ ತೊಂದರೆಯಾಗುತ್ತದೆ. ಡಿಸ್ಟ್ರಿಕ್ಟ್ ರಿಜಿಸ್ಟ್ರಾರ್‌ಗೆ ರಿವ್ಯೂ ಮಾಡಿ ಪರ್ಸನಲ್ ಡಿಸಿಷನ್

ತೆಗೆದುಕೊಳ್ಳುವ ಪವರ್ ಏನು ಕೊಟ್ಟಿದ್ದಾರೆ ಅದರಂತೆ ಅವರು ಕ್ರಮ ತೆಗೆದುಕೊಳ್ಳಬೇಕು. ಪಾರ್ಟಿಷನ್ ಮಾಡಿದ ಜಮೀನು ರಿಜಿಸ್ಟರ್ ಮಾಡುವುದಕ್ಕೆ 250 ರೂಪಾಯಿಗಳನ್ನು ಕೊಡಬೇಕು. ಯಾರಾದರೂ ಸ್ವಂತ ಸೌಸಸ್‌ಗೆ ಆ ಜಮೀನನ್ನು ದಾನ ಕೊಟ್ಟರೆ ಕನ್‌ಸಿಷನ್ ಇದೆ. ಇವೆರಡು ಒಳ್ಳೆಯ ಕೆಲಸ ಮಾಡಿದ್ದಾರೆ. ಆದರೆ ಇದಕ್ಕೆ ಪ್ರಚಾರ ಇಲ್ಲ. ಇವತ್ತೂ ಅದನ್ನು ರಿಜಿಸ್ಟರ್ ಮಾಡಿ ಎಂದು ಕೇಳುತ್ತಾರೆ. ಇವತ್ತೂ ಅದಕ್ಕೆ ಸ್ಟ್ಯಾಂಪ್ ಡ್ಯೂಟಿ ಕೊಡಿ ಎಂದು ಕೇಳುತ್ತಾರೆ. ತಾವು ಒಳ್ಳೆಯ ಕೆಲಸ ಮಾಡಿದ್ದನ್ನು ಪ್ರಚಾರ ಮಾಡಿ ಕನಿಷ್ಟ ವಿಲೇಜ್ ಅಕೌಂಟೆಂಟ್ ಆಫೀಸರ್‌ಗೆ ಮಾಹಿತಿ ಲಭ್ಯವಾಗುವ ಹಾಗೆ ಮಾಡಬೇಕು.

ಶ್ರೀ ಬಿ. ಸೋಮಶೇಖರ್ : ಈ ರಿಜಿಸ್ಟ್ರೇಷನ್ ಮತ್ತು ಸ್ಟ್ಯಾಂಪ್ ಇಲಾಖೆಯಲ್ಲಿ ನಮ್ಮ ಸರ್ಕಾರ ತಂದಂತಹ ಸುಧಾರಣೆಗಳು 20-25 ವರ್ಷಗಳಿಂದ ಯಾರೂ ತಂದಿಲ್ಲವೆಂದು ನಾನು ಹೆಮ್ಮೆಯಿಂದ ಹೇಳುತ್ತೇನೆ. ಶ್ರೀ ಸೋಮಶೇಖರ್ ತಂದರೆ ಪ್ರಚಾರ ಕೊಡಬಾರದು ಎಂದು ಮನಸ್ಸಿನಲ್ಲಿದ್ದರೆ ಏನು ಮಾಡುವುದು ? ಕೆಲವು ಸಾರಿ ಕೊಳಕು ಮನಸ್ಸಿದ್ದರೆ ಏನು ಮಾಡುವುದು ? ನಾನು ಇಂತಹವರು ಎಂದು ಬೊಟ್ಟು ಮಾಡಿ ತೋರಿಸುವುದಿಲ್ಲ. ಒಂದು ಸಾರಿ ಪತ್ರಿಕೆಯಲ್ಲಿ ಹಾಕಿದ್ದೇನೆ, ಇನ್ನೊಂದು ಅನೇಕ ಸಾರಿ ನಾನು ಭಾಷಣಗಳನ್ನು ಮಾಡಿದ್ದೇನೆ. ಇವತ್ತು ಡೀಡ್ ರೈಟ್ ಬಗ್ಗೆ ಮಾಡಲ್ ಡೀಡ್ ಡಾಕ್ಯುಮೆಂಟ್ಸ್‌ನ್ನು ನಾವು ತಯಾರು ಮಾಡಿದ್ದೇವೆ. ಆ ಬಿಕ್ಷಂನ್ನು ಬರೆಯುವ ಅವಶ್ಯಕತೆ ಇಲ್ಲ. ಪುರಾತನ ಕಾಲದಲ್ಲಿ 1900ರಲ್ಲಿ ಅದನ್ನು ಬರೆಯುತ್ತಿದ್ದರು. ಡೀಡ್ ರೈಟರ್ ಈಗ ಅದನ್ನು ಬರೆಯಬೇಕಾದ ಅವಶ್ಯಕತೆ ಇಲ್ಲ. ಮಾಡಲ್ ಡೀಡ್ ರೈಟಿಂಗ್ ಪ್ರೊಫಾರ್ಮ ಡಿಸೈನ್ ಮಾಡಿದ್ದೇವೆ. ಜೊತೆಗೆ ಸ್ಟ್ಯಾಂಪ್ ಪೇಪರ್ ತೆಗೆಯುವುದು, ಫ್ಯಾಂಕಿಂಗ್ ಮೆಷಿನ್ ಇಂಟ್ರಡ್ಯೂಸ್ ಮಾಡುವುದು ಚಲನ್ ಮತ್ತು ಡಿಡಿ ತೆಗೆದುಕೊಂಡು ಹೋಗತಕ್ಕಂತಹ ವ್ಯವಸ್ಥೆ ಈ ಎಲ್ಲಾ ವ್ಯವಸ್ಥೆಗಳನ್ನು ನಾವು ಮಾಡಿದ್ದೇವೆ. ಇವರಿಗೆ ಸುಮಾರು 1957ನೇ ಇಸವಿಯಿಂದ ತಂದೆ ಮಕ್ಕಳಿಗೆ ದಾನ ಕೊಟ್ಟರೆ ಅದನ್ನು ರಿಜಿಸ್ಟರ್ ಮಾಡಬೇಕಾಗಿಲ್ಲ. ಸ್ಟ್ಯಾಂಪ್ ಡ್ಯೂಟಿ ಕಟ್ಟಬೇಕಾಗಿಲ್ಲ. ಅದರಲ್ಲಿ ಕನ್‌ಸಿಡರೇಷನ್ ಇಲ್ಲ. ಹಾಗಾಗಿ ಸ್ಟ್ಯಾಂಪ್ ಡ್ಯೂಟಿ ಕಟ್ಟಬೇಕೆನ್ನುವ ಕಷ್ಟದಿಂದ ಮೂರು-ನಾಲ್ಕು ತಲೆಮಾರುಗಳಿಂದ ರಿಜಿಸ್ಟ್ರೇಷನ್ ಆಗಲಿಲ್ಲ. ಇದನ್ನು ನಾವು ಪ್ರಥಮ ಬಾರಿಗೆ ಐತಿಹಾಸಿಕವಾಗಿ ತೆಗೆದುಹಾಕಿ ಕೇವಲ 250 ರೂಪಾಯಿಗಳನ್ನು ಕೊಟ್ಟರೆ ಅವರಿಗೆ ರಿಜಿಸ್ಟರ್ ಮಾಡಬೇಕೆಂದು ತೀರ್ಮಾನ ತೆಗೆದುಕೊಂಡಿದ್ದೇವೆ. ಇದು ನಮ್ಮ ಸರ್ಕಾರದ ಐತಿಹಾಸಿಕ ತೀರ್ಮಾನ. ದಾನ ಪತ್ರದ ವಿಲ್ ಇರಬಹುದು, ಅಧಿಕೃತವಾಗಿ ಕಾನೂನು ದೃಷ್ಟಿಯಿಂದ ಹಕ್ಕುದಾರನಾಗಬಹುದು, ಮತ್ತೆ ಕಟ್ಟಬಹುದು ತನ್ನದನ್ನಾಗಿ ಮಾಡಿಕೊಳ್ಳಬಹುದು ಎನ್ನುವುದನ್ನು ನಾವು ತಂದಿದ್ದೇವೆ. ಇನ್ನು ಅಂಡರ್ ವ್ಯಾಲ್ಯೂಯೇಷನ್ ಬಗ್ಗೆ ಫೆನಾಲ್ಟಿಯನ್ನು ಅದನ್ನು ಶೇಕಡ 30ಕ್ಕೆ ಕಟ್ಟಿದರೆ ಅಂಥವರ ಕೇಸ್‌ಗಳನ್ನು ಮುಕ್ತಾಯ ಮಾಡಲಾಗುವುದು ಎನ್ನುವ ಯೋಜನೆಯನ್ನು ಸಹ ತಂದಿದ್ದೇವೆ. ಇದು 20ನೇ ತಾರೀಖಿನವರೆಗೂ ಜಾರಿಯಲ್ಲಿದೆ. ಈ ತಾರೀಖಿನೊಳಗೆ ಈ ಯೋಜನೆಗೆ ಜನರು ಹೇಗೆ ರಿ-ಆಕ್ಷನ್ ತೋರಿಸುತ್ತಾರೆ ಎಂಬುದನ್ನು ನೋಡಿಕೊಂಡು ಇದನ್ನು ಮುಂದುವರಿಸಬೇಕೇ ಅಥವಾ ಬೇಡವೇ ಎಂಬ ಬಗ್ಗೆ ಯೋಚನೆಯನ್ನು ಮಾಡಲಾಗುವುದು. ಇನ್ನು ಬೆಂಗಳೂರಿನಲ್ಲಿಯೇ ಆಗಬಹುದು

ಅಥವಾ ರಾಜ್ಯದ ಯಾವ ಭಾಗದಲ್ಲಿಯೇ ಆಗಬಹುದು, ರಿಜಿಸ್ಟ್ರೇಷನ್‌ನ್ನು ಮಾಡುವ ಸೌಲಭ್ಯ ಏನಿದೆ ಈ ಬಗ್ಗೆ ಆನ್-ಲೈನ್ ರಿಜಿಸ್ಟ್ರೇಷನ್ ವ್ಯವಸ್ಥೆಯನ್ನು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇದರಿಂದಾಗಿ ರಾಮನಗರದಲ್ಲಿ ಮಾಡತಕ್ಕಂಥ ಸಬ್-ರಿಜಿಸ್ಟ್ರೇಷನನ್ನು ಇಲ್ಲಿಯೇ ಮಾಡಬಹುದು. ಇದಕ್ಕೆ ಸಂಬಂಧಪಟ್ಟಂತೆ ತೀರ್ಮಾನವನ್ನು ತೆಗೆದುಕೊಳ್ಳುತ್ತಿದ್ದೇವೆ. ಒಂದು ರೀತಿಯಲ್ಲಿ ರೈಲ್ವೆ ಟಿಕೆಟನ್ನು ಯಾವುದೇ ಸ್ಥಳದಲ್ಲಿ ರಿಸರ್ವೇಷನ್ ಮಾಡುವ ಪದ್ಧತಿ ಹೇಗಿದೆಯೋ ಅದೇ ರೀತಿಯಲ್ಲಿ ರಿಜಿಸ್ಟ್ರೇಷನನ್ನೂ ಕೂಡ ಯಾವುದೇ ಸಬ್-ರಿಜಿಸ್ಟ್ರಾರ್‌ರವರ ಕಛೇರಿಯಲ್ಲಿ ಮಾಡಬಹುದು. ಇದಕ್ಕೆ ಸಂಬಂಧಪಟ್ಟಂತೆ ಮಾರ್ಗಸೂಚಿ ದರಗಳನ್ನು ಫ್ಲಾಪಿಯಲ್ಲಿ ಸಿಗುವಂತೆ ಮಾಡಲಾಗುತ್ತಿದೆ. ಈ ಮಾರ್ಗಸೂಚಿ ದರಗಳ ಪ್ರಕಾರ ಯಾವುದೇ ಸಬ್-ರಿಜಿಸ್ಟ್ರಾರ್ ಕಛೇರಿಯಲ್ಲಿ ರಿಜಿಸ್ಟ್ರೇಷನ್ ಮಾಡಿಸಬಹುದು. ಅದನ್ನೂ ಕೂಡ ನಾವು ತರುತ್ತೇವೆ. ಹೀಗಾಗಿ ಕೆಲವು ರೆವಲ್ಯೂಷನರಿ ಬದಲಾವಣೆಗಳನ್ನು ಮಾಡುತ್ತಿದ್ದೇವೆ. ಆದರೆ ನಮಗೆ ಟೈಮ್ ಇಲ್ಲ. ಆದರೆ ಸಿಕ್ಕಿರತಕ್ಕಂಥ ಒಂದು ವರ್ಷದ ಅವಧಿಯಲ್ಲಿ ನಾವು ತಂದಿರತಕ್ಕಂಥ ಬದಲಾವಣೆಗಳ ಬಗ್ಗೆ ಹೇಳುತ್ತಾ ಹೋದರೆ ಸಮಯವೇ ಸಾಕಾಗುವುದಿಲ್ಲ. ಅಂಥ ಐತಿಹಾಸಿಕ ತೀರ್ಮಾನಗಳನ್ನು ನಮ್ಮ ಸರ್ಕಾರ ಮಾಡಿದೆ. ಆದುದರಿಂದ ಪತ್ರಿಕೆಯವರೂ ಹಾಗೂ ಶಾಸಕರುಗಳೂ ಸಹ ನಮಗೆ ಸಹಕಾರವನ್ನು ಕೊಡಬೇಕು. ಶಾಸಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿ ಸಭೆಗಳನ್ನು ಮಾಡಿದಾಗ ಸಾರ್ವಜನಿಕರಿಗೆ ಈ ಬಗ್ಗೆ ತಿಳುವಳಿಕೆಯನ್ನು ನೀಡಬೇಕು. ಸಾರ್ವಜನಿಕರು ಎಲ್ಲಿಯವರೆಗೆ ಇರುವ ವ್ಯವಸ್ಥೆಯನ್ನು ಅಕ್ಸೆಪ್ಟ್ ಮಾಡಿಕೊಳ್ಳುತ್ತಾರೋ ಅಲ್ಲಿಯವರೆವಿಗೂ ಇದು ಹೀಗೆಯೇ ನಡೆದುಕೊಂಡು ಹೋಗುತ್ತಿರುತ್ತದೆ. ಮಾನ್ಯ ಸಭಾಧ್ಯಕ್ಷರು ಆಗಲೇ ಒಂದು ಮಾತನ್ನು ಹೇಳಿದರು. ಇವೊತ್ತು ಎರಡು ಪರ್ಸೆಂಟ್ ಜನರು ಯಾರಿದ್ದಾರೆ, they are taking the people for ride. If it has to be corrected, our representatives have to take initiative and educate the people .....

ಶ್ರೀ ಅರಗ ಜ್ಞಾನೇಂದ್ರ : ಮಾನ್ಯ ಮಂತ್ರಿಯವರೇ, ರಿಜಿಸ್ಟ್ರೇಷನ್ ಆದ ಕೂಡಲೇ ಆ ಸ್ಲಿಪ್ ಬಂದ ತಕ್ಷಣ ಆಟೋಮ್ಯಾಟಿಕಲಿ ಖಾತೆ ಪಹಣಿ ಬದಲಾವಣೆ ಮಾಡಿಕೊಡುವ ಕೆಲಸವನ್ನು ಈಗ ಮಾಡುತ್ತಿಲ್ಲ. ಅದನ್ನು ಮಾಡಬೇಕು.

ಶ್ರೀ ಬಿ. ಸೋಮಶೇಖರ್ : ಅದನ್ನೂ ಕೂಡ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಆದರೆ ಅದನ್ನು ಜಾರಿಗೆ ತರಬೇಕಾದರೆ ನಮಗೆ ಸ್ವಲ್ಪ ಕಾಲಾವಕಾಶ ಬೇಕಾಗುತ್ತದೆ.

ಸಾಗರ ಪುರಸಭೆಯ ವ್ಯಾಪ್ತಿಯಲ್ಲಿ ಆಶ್ರಯ ಯೋಜನೆಯಡಿ ನಿವೇಶನ ಹಂಚಿಕೆಗೆ ಜಮೀನಿನ ಮಂಜೂರಾತಿ

413 - ಶ್ರೀ ಕಾಗೋಡು ತಿಮ್ಮಪ್ಪ (ಸಾಗರ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಗರ ಪುರಸಭೆಯ ವ್ಯಾಪ್ತಿಯಲ್ಲಿ ನಿವೇಶನ ರಹಿತರಿಗೆ ಆಶ್ರಯ ಯೋಜನೆ ಅಡಿ ನಿವೇಶನ ಹಂಚಲು ಸಾಗರ ತಾಲ್ಲೂಕು ಕಂಬಳಿಕೊಪ್ಪ ಗ್ರಾಮದ ಸ.ನಂ. 52ರಲ್ಲಿ 13-